**<u>ದಿನಾಂಕಃ 28.01.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.</u>**

<u>ಪಾಟೀ ಸವಾಲು ವಾದಿ ಪರ ಶ್ರೀ. ಸಿ.ಎಂ.ಕೆ. ವಕೀಲರಿಂದಃ-</u>

1) ನನ್ನ ಪ್ರಮಾಣ ಪತ್ರದಲ್ಲಿ ನಮೂದಿಸಿರುವ ವಿಳಾಸದ ಮನೆ ನನ್ನ ಸ್ವಂತ ಮನೆ. ಸದರಿ ಮನೆ ನನ್ನ ಪತಿಯ ತಾತನಿಂದ ನನ್ನ ಪತಿಗೆ ಬಂದು ನಂತರ ನನಗೆ ಬಂದಿದೆ. ಸದರಿ ಮನೆಯ ಖಾತೆ ಪ್ರಸ್ತುತ ನನ್ನ ಹೆಸರಿನಲ್ಲಿ ಇದೆ. ಸದರಿ ಮನೆಯ ವಿಸ್ತೀರ್ಣ 66*40 ಅಡಿ ಆರ್.ಸಿ.ಸಿ ಕಟ್ಟಡ ಎಂದರೆ ಸರಿ. ಸದರಿ ಮನೆ ಕೋಟ್ಯಾಂತರ ರೂ ಬೆಲೆ ಬಾಳುತ್ತದೆ ಎಂದರೆ ಸರಿ. ನನ್ನ ಪತಿ ಶಿವಕುಮಾರ್ ರವರು ಮರಣ ಹೊಂದಿದ ಕಾರಣ ನನ್ನ ಹೆಸರಿಗೆ ಪೌತಿ ಖಾತೆ ಆಗಿ ಬಂದಿದೆ ಎಂದರೆ ಸರಿ. ನನ್ನ ಪತಿ ಕಾಣೆಯಾದ ಬಗ್ಗೆ ಯಾವುದೇ ದೂರು ದಾಖಲು ಮಾಡಿಲ್ಲ. ಯಾವ ಕಾರಣಕ್ಕಾಗಿ ದೂರು ಮಾಡಿರಲಿಲ್ಲ ಎಂದರೆ ಅವರು ಹಿಂತಿರುಗಿ ಬರುತ್ತಾರೆ ಎಂದು ದೂರು ದಾಖಲು ಮಾಡಿರಲಿಲ್ಲ. ನನ್ನ ಪತಿ ಅವರಾಗಿಯೇ ವಾಪಸ್ಸು ಮನೆಗೆ ಬರಲಿಲ್ಲ. ನನ್ನ ಪತಿ ಕಾಣೆಯಾಗಿರಲಿಲ್ಲ ಹಾಗೂ ವಾರಾನುಗಟ್ಟಲೇ ಮನೆ ಬಿಟ್ಟು ಹೋಗಿರಲಿಲ್ಲ ಎಂದರೆ ಸರಿಯಲ್ಲ. ನಿಮ್ಮ ಪತಿ ಮಾನಸಿಕ ಅಸ್ವಸ್ಥರಾಗಿದ್ದರು ಎಂದು ಹೇಳುವ ಸಂಬಂಧವಾಗಿ ಅವರಿಗೆ ಚಿಕಿತ್ಸೆ ಕೊಡಿಸಿದ್ದೀರಾ ಎಂದರೆ ಸಾಕ್ಷಿ ಚಿಕಿತ್ಸೆ ಕೊಡಿಸುವಷ್ಟು ಮಾನಸಿಕ ಅಸ್ವಸ್ಥರಾಗಿರಲಿಲ್ಲ ಹಾಗಾಗಿ ಅವರಿಗೆ ಚಿಕಿತ್ಸೆ ಕೊಡಿಸಿರಲಿಲ್ಲ. ಅವರು ಸಾಮಾನ್ಯವಾಗಿಯೇ ಇದ್ದರು ಆದರೆ ಸ್ವಲ್ಪ ಮಾನಸಿಕವಾಗಿ ಬೇಜಾಗಿದ್ದರು. ನನ್ನ ಪತಿ ಮೃತರಾಗುವವರೆಗೂ ಅನಾರೋಗ್ಯದ ಕಾರಣ ಆಸ್ಪತ್ರೆಯಲ್ಲಿ ದಾಖಲಾಗಿರಲಿಲ್ಲ.

2) ನಿಮ್ಮ ಪತಿಯೇ ಮನೆಯ ವ್ಯವಹಾರವನ್ನೆಲ್ಲಾ ನೋಡಿಕೊಳ್ಳುತ್ತಿದ್ದರು ಎಂದರೆ ಸಾಕ್ಷಿ ಅವರು ಮನೆ ಬಿಟ್ಟು ಹೋದ ನಂತರ ನೋಡಿಕೊಳ್ಳುತ್ತಿರಲಿಲ್ಲ. ತದನಂತರ ನನ್ನ ಪತಿ ನಡೆಸುತ್ತಿದ್ದ ಚೀಟಿ ವ್ಯವಹಾರವನ್ನು ನಾನೇ ನೋಡಿಕೊಳ್ಳುತ್ತಿದ್ದೆ ಎಂದು ಹೇಳುವ ಸಂಬಂಧವಾಗಿ ಯಾವುದಾದರೂ ದಾಖಲಾತಿ ಇದೇಯೇ ಎಂದರೆ ಸಾಕ್ಷಿ ಇಲ್ಲ. ಸಾಕ್ಷಿ ಮುಂದುವರೆದು ಇಬ್ಬರಿಗೆ ನೀಡಬೇಕಾಗಿದ್ದ ಚೀಟೀ ಹಣವನ್ನು ನಾನೇ ವಾಪಸ್ಸು ನೀಡಿದ್ದೇ ಎಂದು ನುಡಿಯುತ್ತಾರೆ. ನನ್ನ ಪತಿಯ ಸಹಿಯನ್ನು ನೋಡಿದರೆ ಗುರುತಿಸುತ್ತೇನೆ. ನಿಪಿ.1

ರಲ್ಲಿರುವ ಸಹಿ ನನ್ನ ಪತಿಯದ್ದಲ್ಲ. ಅವರು ಕನ್ನಡದಲ್ಲಿ ಮಾತ್ರ ಸಹಿ ಮಾಡುತ್ತಿದ್ದರು. ನನ್ನ ಪತಿ ಸಹಿಯಿರುವ ದಾಖಲಾತಿಗಳು ನನ್ನ ಬಳಿ ಇದೆ ಮುಂದಿನ ದಿನಾಂಕದಂದು ಹಾಜರುಪಡಿಸಬಲ್ಲೆ. ಬ್ಯಾಂಕ್ ನಿಂದ ನನ್ನ ಪತಿಯ ಸಹಿಗಳನ್ನು ತರಿಸಿಕೊಳ್ಳಲೂ ಸಹ ನನ್ನ ಯಾವುದೇ ಅಭ್ಯಂತರವಿಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಣ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ
ನ್ಯಾಯಾಲಯ, ಚನ್ನಪಟ್ಟಣ